# ***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು***

**ಎಸ್‌ಸಿ. 34/2018**

| | | |
|---|---|---|
| ಸಾಕ್ಷಿದಾರರ ಹೆಸರು | ಃ ರಾಜು | *ಪ್ರಮಾಣ ಮಾಡಿಸಿದ ದಿನಾಂಕಃ* |
| ತಂದೆ ಹೆಸರು | ಃ ಲೇಟ್. ವೆಂಕಟೇಶ್ | **18.12.2019** |
| ವಯಸ್ಸು | ಃ 39 ವರ್ಷ | |
| ವೃತ್ತಿ | ಃ ಸಿವಿಲ್ ಕಂಟ್ರಾಕ್ಟರ್ | ಪ್ರಾ.ಸಾ. ಃ 02 |
| ವಾಸಸ್ಥಳ | ಃ ಮೈಸೂರು | ಚಾ.ಸಾ. ಃ 03 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

.ಸಾಕ್ಷಿಯು ಸ್ಥಳದ ಪಂಚನಾಮೆಯ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಪಂಚನಾಮೆ ಈಗಾಗಲೇ ನಿ.ಪಿ.*2* ಎಂದು ಗುರುತಿಸಲಾಗಿದ್ದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.*2*(ಎ) ಎಂದು ಗುರುತಿಸಲಾಯಿತು. ಸುಮಾರು *4-5* ವರ್ಷದ ಹಿಂದೆ ಸದರಿ ಪಂಚನಾಮೆಯ ಮೇಲೆ ನಾನು ಉದಯಗಿರಿ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಪೊಲೀಸ್ ಠಾಣೆಗೆ ಹೋದಾಗ ಪಂಚನಾವೆಯ ಮೇಲೆ ಸಹಿ ತೆಗೆದುಕೊಂಡಿರುತ್ತಾರೆ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ. ಸ್ಥಳದಿಂದ ಯಾವುದೇ ವಸ್ತುಗಳನ್ನು ಜಪ್ತಿ ಮಾಡಿರುವುದಿಲ್ಲ. ಮು.ಮಾ.*1* ಮತ್ತು ಮು.ಮಾ.*2* ರ ಮೇಲೆ ಅಂಟಿಸಿದ ಚೀಟಿಯ ಮೇಲೆ ಕೂಡ ನನ್ನ ಸಹಿ ಪೊಲೀಸ್ ಠಾಣೆಯಲ್ಲಿ ತೆಗೆದುಕೊಂಡಿರುತ್ತಾರೆ. ಯಾವ ವಿಚಾರಕ್ಕೆ ನನ್ನ ತಗೆದುಕೊಂಡಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

.ದಿನಾಂಕಃ *13.03.2016* ರಂದು ರಾತ್ರಿ *21.00* ರಿಂದ *22.30* ಗಂಟೆಯವರೆಗೆ ಜಯಕುಮಾರ ಎನ್ನುವ ಫಿರ್ಯಾದಿ ಸ್ಥಳದಲ್ಲಿ ಹಾಜರಿದ್ದು ಕೊಲೆಯಾದ ಸ್ಥಳದಲ್ಲಿ ಪಂಚನಾಮೆ ಮಾಡಿ

ಸ್ಥಳದಿಂದ ಮು.ಮಾ.*1* ಮತ್ತು ಮು.ಮಾ.*2* ಮತ್ತು ನಿ.ಪಿ.*5* ಮತ್ತು ನಿ.ಪಿ.*6* ಸ್ಥಳದಿಂದ ಅಮಾನತುಪಡಿಸಿಕೊಂಡರು ಮತ್ತು ಮೃತನ ಮೋಟಾರು ಬೈಕು ಅಲ್ಲೇ ಬಿದ್ದಿತ್ತು ಎಂದು ಸೂಚಿಸುವುದು ಸರಿಯಲ್ಲ. ನಾನು ಸ್ಥಳದಲ್ಲಿ ಹಾಜರಿದ್ದು ಪಂಚನಾಮೆ ಬರೆದ ನಂತರ ನಾನು ಸಹಿ ಮಾಡಿದ್ದರು ಕೂಡ ಆರೋಪಿಗಳಿಗೆ ಸಹಾಯ ಮಾಡಲು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

<u>ಪಾಟೀ ಸವಾಲು ಃ ಎಲ್ಲಾ ಆರೋಪಿತರ ಪರ ವಕೀಲರಿಂದಃ-</u>

. ಪಾಟೀ ಸವಾಲು ಇಲ್ಲ ಎಂದು ಹೇಳಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

***ಮರು ವಿಚಾರಣೆಃ- ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

***ಓ ಹೇ ಕೇ ಸ ಇ ಎ ಒ.,***

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
***ಮೈಸೂರು***